Os No. 6191/2011
DW 1

ಸಾಕ್ಷಿಯನ್ನು ಕರೆಸಿ ದಿನಾಂಕ : 05.02.2019 ರಂದು ಪ್ರಮಾಣೀಕರಿಸಲಾಯಿತು.

ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು : ವಾದಿ ಪರ ವಕೀಲರಿಂದ :

ನಾನು ಮರು ಉತ್ತರ ನನ್ನ ವಕೀಲರ ಮುಖಾಂತರ ದಿ : 06.09.2011 ನಲ್ಲಿ ಕಳುಹಿಸಿದ್ದೇನೆ ಎಂದರೆ ಸರಿ. ನಾನು ಕಳುಹಿಸಿರುವ ಮರು ಉತ್ತರ ದಲ್ಲಿ ನನ್ನ ಮತ್ತು ನಾಗರಾಜುವಿನ ಮದ್ಯೆ ಆಗಿರುವ ಅಗ್ರಿಮೆಂಟ್ ಆಫ್ ಕಂಟ್ರಾಕ್ಟ್ ದಿ : 16.07.2007 ನ ಬಗ್ಗೆ ಎಲ್ಲಿಯೂ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮರು ಉತ್ತರದ ನಾಲ್ಕನೇ ಕಂಡಿಕೆಯಲ್ಲಿ ಅಗ್ರಿಮೆಂಟ್ ಆಫ್ ಕಂಟ್ರಾಕ್ಟ್ ನ ನಮೂದು ಮಾಡಿರುತ್ತೇನೆ. ನನ್ನ ಮರು ಉತ್ತರದಲ್ಲಿ ಅಗ್ರಿಮೆಂಟ್ ಆಫ್ ಕಂಟ್ರಾಕ್ಟ್ ನ ದಿನಾಂಕವನ್ನು ನಮೂದು ಮಾಡಿಲ್ಲ ಎಂದರೆ ಸರಿ. ದಿ : 16.07.2007 ರ ಅಗ್ರಿಮೆಂಟ್ ಆಫ್ ಕಂಟ್ರಾಕ್ಟ್ ನಾನು ಮತ್ತು ನಾಗರಾಜುರವರು ಸುಳ್ಳು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ದಿ : 16.07.2007 ರ ಅಗ್ರಿಮೆಂಟ್ ಆಫ್ ಕಂಟ್ರಾಕ್ಟ್ ನ್ನು ವಾದಿಯು ತಯಾರಿಸಿರುತ್ತಾರೆ ಮತ್ತು ಸದರಿ ದಾಖಲೆಗೆ ಸಹಿ ಮಾಡುವಾಗ ವಾದಿಯು ಸಹ ಹಾಜರಿದ್ದರು . ವಾದಿಯನ್ನು ಸಾಕ್ಷಿಯನ್ನಾಗಿ ಮಾಡಲು ನಾವು ಕೇಳಿದೆವು ಆದರೆ ವಾದಿಯು ರೂ . 15 ಲಕ್ಷ ರೂವಿನ ಚೆಕ್‌ನ್ನು ವಾದಿಯು ನಾಗರಾಜ್‌ರವರಿಗೆ ನಮಗೆ ಕೊಡಿಸಿದರು ಎಂದು ಸಾಕ್ಷಿ ನುಡಿಯುತ್ತಾರೆ .

Os No. 6191/2011
DW 1

ದಿ : 16.07.2007 ರ ಅಗ್ರಿಮೆಂಟ್ ಆಫ್ ಕಂಟ್ರಾಕ್ಟ್ ನ್ನು ಗಣನೆಗೆ ತೆಗೆದುಕೊಳ್ಳದೇ ನಾಗರಾಜುರವರು ಪ್ರತಿವಾದಿಗೆ 15 ಲಕ್ಷ ರೂಗಳನ್ನು ಕೊಡಬೇಕು ಎಂದು ಕರಾರು ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 15 ಲಕ್ಷ ರೂ ಕೊಡಬೇಕು ಎಂದು ವಾದಿಯು ನಾಗರಾಜುರವರಿಗೆ ತಿಳಿಸಿದ್ದರು . ದಿ : 16.07.2007 ರ ಅಗ್ರಿಮೆಂಟ್ ಆಫ್ ಕಂಟ್ರಾಕ್ಟ್ ನ ಪ್ರಕಾರ ನನಗೆ ನಾಗರಾಜುರವರು ಹಣ ಪಾವತಿ ಮಾಡಿಲ್ಲ . ದಿ : 16.07.2007 ರ ಅಗ್ರಿಮೆಂಟ್ ಆಫ್ ಕಂಟ್ರಾಕ್ಟ್ ನ ಪ್ರಕಾರ ನನಗೆ 5 ಲಕ್ಷ ರೂ ತಲುಪಿರುವುದಿಲ್ಲ. ನಾಗರಾಜು ಮತ್ತು ವಿಠಲ್ ಮೂರ್ತಿಯವರನ್ನು ನಾನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿಲ್ಲ. ನಾನು ನಾಗರಾಜು ಮತ್ತು ವಿಠಲ್ ಮೂರ್ತಿಯವರ ವಿರುದ್ಧ ದಾವಾ ಸಲ್ಲಿಸಿಲ್ಲ. ದಿ : 16.07.2007 ರ ಅಗ್ರಿಮೆಂಟ್ ಆಫ್ ಕಂಟ್ರಾಕ್ಟ್ ನ ಬಗ್ಗೆ ನಾನು ಲಿಖಿತ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ನಾಗವೇಣಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .